


**ಎಡದಿಂದ ಬಲಕ್ಕೆ**

1. ಹೆಚ್ಚಿಲ್ಲ, ಕಡಿಮೆಯಿಲ್ಲ; ಶುರುವಾಯಿತು ಸಂಭ್ರಮದ ಆಚರಣೆ 4
3. ಅನ್ಯೋನ್ಯತೆಯಿಂದ ಮಾಡಬಹುದಾದ ಸಾಧನೆಗಳಿಗೆ ಕೊನೆಯೇ ಇಲ್ಲ 3
4. ಚೆನ್ನಾಗಿ ಓದಿದವನ ಮುಖ ನೋಡಿದರೇ ಸಾಕು 3
6. ತಪ್ಪು ಮಾಡಿದವನು ಪ್ರಾಯಶ್ಚಿತ್ತಕ್ಕಾಗಿ ಹೋದದ್ದು ಋಷಿಗಳಿರುವ ಕಾಡು 4
7. ಆತ ಎಸಗಿದ ದುಷ್ಕೃತ್ಯಗಳಲ್ಲಿ ಇದೇ ಕೊನೆಯದು 3
9. ಅಬ್ಬರದಿಂದ ನುಗ್ಗಿ ಬಂದದ್ದು ಸಾಗರವೇ ತಾನೇ? 3
11. ಕದಿಯಲು ಬಂದವನಿಗೆ ತಿಳಿಹೇಳಿ ಕೊಟ್ಟದ್ದು ಬಾಳೆಹಣ್ಣು 3
13. ಕುಡುಕರಿಗೆ ಕೈಗೂಡುವುದೆಲ್ಲ ಬರೀ ಕೆಟ್ಟದ್ದು ಅಷ್ಟೆ 3
15. ನಾರಿಯರ ಕೈಗೆ ಸಿಕ್ಕಿಬಿದ್ದವನು ಈ ದೇಶದವನೇ ಒಬ್ಬ ಪ್ರಜೆ 4
17. ತುಂಬ ದುಸ್ತರವಾಗಿದೆ ಈ ರಿಪೇರಿ ಕೆಲಸ 3
18. ಕಪಾಟಿನಲ್ಲಿ ಇಡಬಾರದು, ಅದು ಸಿಡಿಯುವ ವಸ್ತು 3
19. ಸಿಕ್ಕದ್ದನ್ನೆಲ್ಲ ಕಿತ್ತುಕೊಳ್ಳುವ ಕ್ರೀಡೆಯೇ? 4

**ಮೇಲಿನಿಂದ ಕೆಳಕ್ಕೆ**

1. ಸಂತ್ರಸ್ತರ ಬದುಕಿನಲ್ಲಿ ಕಷ್ಟಗಳೇ ನಿರಂತರ 3
2. ವೈಭವವನ್ನು ಪ್ರದರ್ಶಿಸಲೆಂದೇ ನಿರ್ಮಿಸಲಾದ ಭವ್ಯ ಕಟ್ಟಡ 3
3. ಆತನ ಎಲ್ಲ ಕೆಲಸಗಳಲ್ಲೂ ಬರೀ ಅನ್ಯಾಯ 3
5. ಸ್ವಭಾವವನ್ನು ಚೆನ್ನಾಗಿ ತಿಳಿದವರು ಸಿಕ್ಕಿದ್ದು ಆಕೆಯ ಅದೃಷ್ಟ 3
7. ಆತನ ಆತಂಕಕ್ಕೆ ಕಾರಣನಾದವ ಮೃತ್ಯುದೇವ 3
8. ಮರಳಿ ಮರಳಿ ಮೋಹಕ್ಕೆ ಸಿಲುಕಿ ಈಗ ಹುಚ್ಚಿಯೇ ಆಗಿದ್ದಾಳೆ 3
9. ಅಜ್ಜಿಯ ಕೈಗೆ ಸಿಕ್ಕಿಬಿದ್ದರೆ ಹೇಗೆಂಬ ಭಯ 3
10. ಮುದುಕಿಯಾಗಿದ್ದರೂ ಆಕೆಯ ದರ್ಪ, ಗರ್ವ ನೋಡಿದಿರಾ? 3
12. ದೂರದವರನ್ನೂ ಕರೆತರಲೇಬೇಕೆಂಬ ಅಗತ್ಯವಾದರೂ ಏನು? 3
14. ಮಡಿಕೆಗಳನ್ನು ಜೋಡಿಸುವ ಕೌಶಲ್ಯ ಪರೀಕ್ಷೆಯಲ್ಲಿ ಆತ ನಪಾಸು 3
15. ಆಸ್ತಿಯೆಲ್ಲ ಕೈಬಿಟ್ಟೊಡನೆ ಆತ ದೇವರಲ್ಲಿ ನಂಬಿಕೆ ಇಲ್ಲದವನಾದ 3
16. ಪುಕ್ಕಟೆ ನೀಡುತ್ತೇವೆಂದು ನಂಬಿಸಿದ್ದೆಲ್ಲ ಬರೀ ಮೋಸ 3

---

### 17-08-2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಂತಾಪ 3. ಸುರಂಗ 4. ತಾಕೀತು 6. ಸುಲಭಿಸು 7. ನಗದಾನ 9. ನನೆಗುದಿ 11. ಸವಿಗಾನ 15. ತುಮುಲ 16. ಗಣತಿ 17. ಕರಿದು

**ಮೇಲಿನಿಂದ ಕೆಳಕ್ಕೆ**

1. ಸಂಗತಿ 2. ಪತಾಕೆ 3. ಸುರಭಿ 5. ತುಡುಗ 6. ಸುಮ್ಮಾನ 8. ನಮನ 10. ಗುರುತು 12. ವಿನಂತಿ 13. ಬಾಲಕ 14. ನಗದು

**ಪ್ರಶ್ನಾಂಕಣ**


# ಪತ್ತೆಯಾಯಿತೇ ಹೊಸ ಪರಮ ದೈತ್ಯ?

ಧರೆಯ ಪ್ರಾಣಿಲೋಕದ ಸಾರ್ವಕಾಲಿಕ ಪರಮ ದೈತ್ಯ ಯಾವುದು? ಈ ಪ್ರಶ್ನೆಗೆ ಇತ್ತೀಚಿನವರೆಗೂ ಇದ್ದ ಸಂಶಯಾತೀತ ಉತ್ತರ ಒಂದೇ: ನೀಲಿ ತಿಮಿಂಗಿಲ, ಹೌದಲ್ಲ? ದೈತ್ಯ ಗಾತ್ರಕ್ಕೆ ಸಮಾನಾರ್ಥಕವಾಗಿರುವ ತಿಮಿಂಗಿಲಗಳ (ಚಿತ್ರ ನೋಡಿ) ಒಂದು ಪ್ರಭೇದವಾದ ನೀಲಿ ತಿಮಿಂಗಿಲ ಪ್ರಾಣಿ ಪ್ರಪಂಚದ ಪರಮ ದೈತ್ಯ. ಹುಟ್ಟುವಾಗಲೇ 25 ಅಡಿ ಉದ್ದ ಇದ್ದು, 35 ಟನ್ ತೂಕ ಇದ್ದು, ದಿನಕ್ಕೆ 250 ಲೀಟರ್ ತಾಯಿ ಹಾಲನ್ನು ಕುಡಿದು ಬೆಳೆವ ನೀಲಿ ತಿಮಿಂಗಿಲ ವಯಸ್ಕ ಹಂತ ತಲುಪುವ ವೇಳೆಗೆ 80 ಅಡಿ ಉದ್ದ ಮುಟ್ಟುತ್ತದೆ; 150 ರಿಂದ 200 ಟನ್ ತೂಕ ತಲುಪುತ್ತದೆ (ಇದು 30 ರಿಂದ 40 ವಯಸ್ಕ ಆನೆಗಳ ಒಟ್ಟು ತೂಕಕ್ಕೆ ಸಮ) ಇಂಥ ದೈತ್ಯ ಪ್ರಾಣಿ ಬೇರಾವುದೂ ಧರೆಯಲ್ಲಿ ಇದ್ದ ದಾಖಲೆ ಈವರೆಗೆ ದೊರಕಿರಲಿಲ್ಲ.

ವಿಸ್ಮಯ ಏನೆಂದರೆ, ಅದನ್ನು ಮೀರಿಸಿದ ದಾಖಲೆಯೊಂದು ಇದೀಗ ದೊರಕಿದೆ! ಹಾಗಾಗಿ ನೀಲಿ ತಿಮಿಂಗಿಲದ ಪರಮ ದೈತ್ಯ ಸ್ಥಾನ ಈಗ ಅಭದ್ರವಾಗಿದೆ.

ದಕ್ಷಿಣ ಅಮೆರಿಕ ಖಂಡದ ಪೆರು ದೇಶದಲ್ಲಿ ಶಿಲಾ ಪದರಗಳಲ್ಲಿ ಹುದುಗಿ ಈಗ್ಗೆ ಕೆಲ ವರ್ಷಗಳ ಹಿಂದೆ ಪತ್ತೆಯಾಗಿದ್ದ ಅಜ್ಞಾತ ದೈತ್ಯ ಪ್ರಾಣಿಯೊಂದರ ಅಸ್ಥಿ ಪಂಜರದ ಕೆಲ ಭಾಗಗಳನ್ನು ಪಳೆಯುಳಿಕೆ ತಜ್ಞರು ಹಲವು ವರ್ಷಗಳ ನಿರಂತರ ಪ್ರಯತ್ನದ ನಂತರ ಇತ್ತೀಚೆಗೆ ಹೊರತೆಗೆದಿದ್ದಾರೆ. ಆ ಪ್ರಾಣಿಯ ವರ್ಗೀಕರಣ ಮಾಡಿ, ಅದರ ಶರೀರದ ರೂಪುರೇಷೆಗಳನ್ನು ನಿರ್ಧರಿಸಿದ್ದಾರೆ; ಅದರ ಬದುಕಿನ ಕಾಲವನ್ನು ತೀರ್ಮಾನಿಸಿದ್ದಾರೆ; ಉದ್ದ ತೂಕಗಳನ್ನು ಅಂದಾಜಿಸಿದ್ದಾರೆ. ಈ ಎಲ್ಲ ಶೋಧಗಳ ವಿವರಗಳು ಪ್ರತಿಷ್ಠಿತ ಸಂಶೋಧನಾ ಜರ್ನಲ್ ನೇಚರ್‌ನಲ್ಲಿ, ಇದೇ ತಿಂಗಳ ಮೊದಲ ವಾರದಲ್ಲಿ ಪ್ರಕಟವಾಗಿವೆ.

ಹೀಗೆ ಪತ್ತೆಯಾಗಿ, ಇದೀಗ ದೈತ್ಯ ಗಾತ್ರದ ಪ್ರಥಮ ಸ್ಥಾನದ ವಿಶ್ವ ದಾಖಲೆಗೆ ನೀಲಿ ತಿಮಿಂಗಿಲದೊಡನೆ ಸ್ಪರ್ಧೆಗೆ ಇಳಿದಿರುವ ಪ್ರಾಣಿಯ ಹೆಸರು ಪೆರೂಸೀಟಸ್ ಕಲಾಸಸ್ (Perucetus Colassus). ಈಗ ಲಭ್ಯವಾಗಿರುವ ಅದರ ಕೆಲವು ಮೂಳೆಗಳ ಆಧಾರದಿಂದ ಅಂದಾಜಿಸಿರುವ ಪ್ರಕಾರ ಸ್ತನಿ ವರ್ಗದ ತಿಮಿಂಗಿಲಗಳ ಗುಂಪಿಗೇ ಸೇರಿದ ಈ ಪ್ರಾಣಿಯ ಉದ್ದ ಸಮೀಪ 65 ಅಡಿ (ಎಂದರೆ ನೀಲಿ ತಿಮಿಂಗಿಲಕ್ಕಿಂತ ಸ್ವಲ್ಪ ಕಡಿಮೆ). ಆದರೆ ಒಟ್ಟು ತೂಕ ಸುಮಾರು 350 ಟನ್. ಸುಮಾರು 400 ದಶಲಕ್ಷ ವರ್ಷ ಹಿಂದೆ ಬದುಕಿದ್ದ ಈ ಪ್ರಾಚೀನ ಪ್ರಾಣಿಗಳದು ಕಡಲಂಚಿನ ಕಡಿಮೆ ಆಳದ ನೆಲೆಗಳಲ್ಲಿ ವಾಸ. ಅಂತಹ ಪ್ರದೇಶಗಳಲ್ಲಿ ಕಡಲಿನ ನೆಲದ ಮೇಲೆ ನಡೆದಾಡಲು ಎರಡು ಮುಂಗಾಲುಗಳ ಅಸ್ತಿತ್ವ. ಪ್ರಸ್ತುತ ಇಂತಹ ಆ ಪರಮ ದೈತ್ಯ ತಿಮಿಂಗಿಲ ಒಂದೂ ಉಳಿದಿಲ್ಲ.



ಈ ಶೋಧಕ್ಕೆ ಆಕರವಾಗುವ ಇನ್ನಷ್ಟು ಪಳೆಯುಳಿಕೆಗಳು ಲಭ್ಯವಾದೊಡನೆ 'ಪೆರೂಸೀಟಸ್ ಕಲಾಸಸ್'ಗೆ ಪ್ರಾಣಿಲೋಕದ ಪರಮ ದೈತ್ಯನ ಸ್ಥಾನ ನಿಶ್ಚಿತ!

■ ಎನ್. ವಾಸುದೇವ್